ಅಧ್ಯಕ್ಷರು :- ಸ್ವಾಮಿ, ಬೇರೆ ವಿಷಯದ ಬಗ್ಗೆ ಸದನದಲ್ಲಿ ನಡೆಯುತ್ತಿರುವಾಗ ಮಧ್ಯದಲ್ಲಿ ಹೇಳಿದರೆ ಹೇಗೆ? ದಯವಿಟ್ಟು ತಾವು ನನ್ನ ಕಛೇರಿಗೆ ಬನ್ನಿ, ಅದನ್ನು ನಾನು ತರಿಸುತ್ತೇನೆ, ಇಲ್ಲಲ್ಲ. It is not on the floor of the House. ಲ್ಲರೂ ಕೇಳುತ್ತಾರೆ, ಈ 80 ಜನ ಎದ್ದು ನಿಂತುಕೊಳ್ಳುತ್ತಾರೆ, ನನ್ನ ಪ್ರಶ್ನೆ ಏನಾಯಿತು? ನನ್ನ ಕಾಲಿಂಗ್ ಅಟೆನ್‌ಷನ್ ಏನಾಯಿತು? ನನ್ನ ಶೂನ್ಯ ವೇಳೆ ವಿಚಾರ ಏನಾಯಿತು ಎಂದು No. You please come to my chambers, I will definitely see. ನಿಮ್ಮ ಮುಂದೆಯೇ ಫೋನ್ ಮಾಡಿ ಉತ್ತರ ತರಿಸುತ್ತೇನೆ.

4. ಅರ್ಜಿಗಳನ್ನೊಪ್ಪಿಸುವುದು

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) :- ಮಾನ್ಯ ಅಧ್ಯಕ್ಷರೆ, ಮಾಜಿ ಸೈನಿಕರು, ರಾಜ್ಯ ಪೋಲೀಸ್ ಇಲಾಖೆಯಲ್ಲಿ ಸೇರ್ಪಡೆಗೊಳ್ಳಲು ಕೇಂದ್ರ ಸರ್ಕಾರವು ನಿಗಧಿಪಡಿಸಿದ ವಯೋಮಿತಿಯನ್ನು ಜಾರಿಗೆ ತರುವ ಬಗ್ಗೆ ಸದನಕ್ಕೆ ಅರ್ಜಿ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು :- ಅರ್ಜಿಯನ್ನು ಒಪ್ಪಿಸಲಾಯಿತು.

5. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ :- ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಖಾಸಗೀಕರಣ ಕುರಿತು ನಿಯಮ 69ರ ಮೇರೆಗೆ ಚರ್ಚೆಗೆ ಒತ್ತಾಯ.

ಶ್ರೀ ವಿ. ಸೋಮಣ್ಣ :- ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಬಗ್ಗೆ 69ನೇ ನಿಯಮದಡಿಯಲ್ಲಿ ಚರ್ಚೆಗೆ ಅವಕಾಶ ಕೊಡಲು ತಮ್ಮನ್ನು ಕೇಳಿದ್ದೆ. ತಾವು ನಿನ್ನೆಯ ದಿವಸವೇ ಅದಕ್ಕೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದಿರಿ. ತದನಂತರ ಇವೊತ್ತು ಬೆಳಿಗ್ಗೆ ಕೂಡ ತಮಗೆ ತಿಳಿಸಿದ್ದೇನೆ.

ಅಧ್ಯಕ್ಷರು :- ಸ್ವಾಮಿ, ತಾವು ಕೊಟ್ಟಿದ್ದೆ ನಿನ್ನೆ, ಇವೊತ್ತು ಅಜೆಂಡಾದಲ್ಲಿ ಕೊನೆಯಲ್ಲಿ ಹಾಕಿಕೊಂಡಿದ್ದೇನೆ.

ಶ್ರೀ ವಿ. ಸೋಮಣ್ಣ :- ಮಾನ್ಯ ಅಧ್ಯಕ್ಷರೆ, ಅಜೆಂಡಾದಲ್ಲಿ ಕೊನೆಯಲ್ಲಿ ಹಾಕಿರುವುದರಿಂದ ಇವೊತ್ತು ಚರ್ಚೆ ಆಗುವುದಿಲ್ಲ.

MR. SPEAKER:- If time permits, we will take up to-day alone.

ಶ್ರೀ ವಿ. ಸೋಮಣ್ಣ :- ಮಾನ್ಯ ಅಧ್ಯಕ್ಷರೆ, ದಯಮಾಡಿ ತಾವು ಈ ವಿಚಾರದ ಸೂಕ್ಷ್ಮತೆಯನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು :- ತಾವು ದಯವಿಟ್ಟು ಕುಳಿತುಕೊಳ್ಳಿ. ಬಂದಿದೆ ಸ್ವಾಮಿ, ಕೊನೆಯಲ್ಲಿ ಹಾಕಿದೆ ನೋಡಿ. ಇವೊತ್ತಿನ ಪ್ರೋಗ್ರಾಂನಲ್ಲಿ ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೆ, ಕನಿಷ್ಠ ಪಕ್ಷ ನಮ್ಮ ಮಸೂದೆಗಳನ್ನು ಮಂಡನೆ ಮಾಡುವುದಕ್ಕೆ ತಾವು ಅವಕಾಶ ಕೊಟ್ಟರೆ ಒಳ್ಳೆಯದು. ಏಕೆಂದರೆ ಇವು ಇಲ್ಲಿ ಪಾಸ್ ಆಗಿ ಮೇಲ್ಮನೆಗೆ ಹೋಗಬೇಕು.

ಶ್ರೀ ವಿ. ಸೋಮಣ್ಣ :- ಮಾನ್ಯ ಅಧ್ಯಕ್ಷರೆ, ತಾವು ಮಸೂದೆ ಮಂಡನೆ ಮಾಡಿ, ಬೇಡ ಎಂದು ನಾನು ಹೇಳುವುದಿಲ್ಲ. ನಾನು ಹೇಳುವ ವಿಚಾರ ಬಹಳ ತುರ್ತಾದ ವಿಚಾರವಾಗಿದೆ.

ಅಧ್ಯಕ್ಷರು :- ಇವತ್ತಿನ ಅಜೆಂಡಾವನ್ನು ತಾವು ಓದಿದ್ದೀರಾ? ಅದನ್ನು ಕಡೆಯಲ್ಲಿ ಹಾಕಿದೆ.

ಶ್ರೀ ವಿ. ಸೋಮಣ್ಣ :- ಮಾನ್ಯ ಅಧ್ಯಕ್ಷರೆ, ಅದನ್ನು ಅಜೆಂಡಾದಲ್ಲಿ ಕಡೆಯಲ್ಲಿ ಹಾಕಿದರೆ ಅದು ಚರ್ಚೆಗೆ ಇಂದು ಎಲ್ಲಿ ಬರುತ್ತದೆ?

ಅಧ್ಯಕ್ಷರು :- ಅದಕ್ಕೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ನೋಡಿ, ಕಾನೂನು ಪ್ರಕಾರ 5 ಗಂಟೆಗೆ ಅದನ್ನು ನಾವು ತೆಗೆದುಕೊಳ್ಳಬೇಕು. ಗೊತ್ತಾ ನಿಮಗೆ? ಓದಿದ್ದೀರಾ ತಾವು? We must take Rule 69 only at 5 O' Clock. One hour before the closing of the day, ಅಂತ ಇದೆ.

ಶ್ರೀ ವಿ. ಸೋಮಣ್ಣ :- ತಾವು ಎಷ್ಟು ಗಂಟೆಗೆ ತೆಗೆದುಕೊಳ್ಳುತ್ತೀರಿ ಎಂದು ಅದನ್ನಾದರೂ ಹೇಳಿ.

ಅಧ್ಯಕ್ಷರು :- 4-45ಕ್ಕೆ ಕೇಳಿ ಅದರ ಬಗ್ಗೆ. ಆಗ ನಾನು ಹೇಳುತ್ತೇನೆ. Not at this stage. It has been included in the Agenda.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೆ, ಅದು ಒಂದು ಬಹಳ ಸೂಕ್ಷ್ಮವಾಗಿರತಕ್ಕಂಥ ವಿಚಾರವಾಗಿರುವುದರಿಂದ ಅದಕ್ಕೆ ಸಿಗಬೇಕು. ಅದರ ಚರ್ಚೆ ಆಗಬೇಕು. ಪ್ರಚಾರ ಆಗಬೇಕು, ಈ ಸರ್ಕಾರ ಏನು ಮಾಡುತ್ತಾ ಇದೆ ಎನ್ನುವುದು ಸಾರ್ವಜನಿಕರಿಗೆ ಗೊತ್ತಾಗಬೇಕು ಎನ್ನುವ ದೃಷ್ಟಿಯಿಂದಲೇ ನಾವು ಅದನ್ನು ಅಡ್ವರ್ಟೈಮೆಂಟ್ ಪೋಷನ್ ಫಾರಂನಲ್ಲಿ ತೆಗೆದುಕೊಂಡು ಬಂದದ್ದು. ಬೇರೆ ಇನ್ಯಾವ ಫರ್ಮ್‌ನಲ್ಲೂ ಅಲ್ಲ. ನೀವು 5 ಗಂಟೆಗೆ, 6 ಗಂಟೆಗೆ ಚರ್ಚೆಗೆ ತೆಗೆದುಕೊಂಡರೆ ಪತ್ರಿಕೆಯವರಿಗೆ ಅದನ್ನೆಲ್ಲಾ ಬರೆಯುವುದಕ್ಕೆ ಕಷ್ಟವಾಗುತ್ತದೆ. ಆದುದರಿಂದ ನಾನು ಮತ್ತು ಮಾನ್ಯ ಸೋಮಣ್ಣನವರು ಒತ್ತಾಯ ಮಾಡುತ್ತಾ ಇರುವುದು ಏನೆಂದರೆ, ಈಗ ನಾವು ಮಾತನಾಡುವುದಿಲ್ಲಾ ಪ್ರಚಾರಕ್ಕೋಸ್ಕರವೇ. ಪತ್ರಿಕೆಗಳಲ್ಲಿ ಬರಬೇಕು ಅದು. ವರದಿ ಆಗಬೇಕು. ಮಾಧ್ಯಮಗಳಲ್ಲಿ ಬಂದು ಜನರಿಗೆ ಗೊತ್ತಾಗಬೇಕು. ಈ ವಿಚಾರಗಳು ಗೊತ್ತಾಗಲಿ ಎನ್ನುವ ದೃಷ್ಟಿಯಿಂದಲೇ ನಾವು ಬೆಳಿಗ್ಗೆ ಹೊತ್ತು ಕೇಳುತ್ತಾ ಇದ್ದೇವೆ. ಅದರ ಮೇಲೆ ತಮಗೆ ಸಂಬಂಧಪಟ್ಟಿದ್ದು, ಕಾನೂನಿನ ಪುಸ್ತಕದಲ್ಲಿ ಆ ರೀತಿ ಇರತಕ್ಕಂಥಾದ್ದು ನಿಜ. ಚರ್ಚೆ ಮಾಡಬಹುದು. ಅದು ಸರ್ಕಾರದ ಮರ್ಜಿ. ಅದಕ್ಕೆ ಅವರು ಬೇಕಾದರೆ ಉತ್ತರ ಕೊಡಬಹುದು. ಬೇಡದೆ ಇದ್ದರೆ ಸುಮ್ಮನೆ ಇರಬಹುದು. ಅದು ರೂಲ್ 69ರಲ್ಲಿ ಮಾಡಿಕೊಂಡಿರತಕ್ಕಂತಾದ್ದು. ಆದರೆ ತಾವು ತಮ್ಮ ಪೀಠದಿಂದ ಯಾವ ವಿಚಾರಕ್ಕೆ ಮಹತ್ವ ಕೊಡಬೇಕೆಂದು ಹೇಳುವಂಥಾದ್ದನ್ನು ಇಡೀ ಕರ್ನಾಟಕದ ಐದೂವರೆ ಕೋಟಿ ಜನ ಯಾವುದಕ್ಕೆ ಮಹತ್ವ ಕೊಡುತ್ತಾರೆಂದು ನೋಡುತ್ತಾರೆ. ಆ ದೃಷ್ಟಿಯಿಂದ ಹೀಗೆ ಚರ್ಚೆಗೆ ಅವಕಾಶ ಕೊಡಬೇಕೆಂದು ಹೇಳುವಂಥಾದ್ದು ನಮ್ಮ ನಮ್ಮ ಮಾನ್ಯ ಸೋಮಣ್ಣನವರ ಮನವಿ.

ಅಧ್ಯಕ್ಷರು :- ಬಿಎಸಿ ಮೀಟಿಂಗ್‌ನಲ್ಲಿ ಏನು ತೀರ್ಮಾನವಾಗಿದೆ ಅದನ್ನು ಇಂಪ್ಲಿಮೆಂಟ್ ಮಾಡುವುದು ನಮ್ಮ ಡ್ಯೂಟಿ. I must go according to the Business Advisory Committee.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೆ, ಬಿಸಿನೆಸ್ ಅಡ್ವೈಸರಿ ಕಮಿಟಿಗೆ ನಮ್ಮ ಪಾರ್ಟಿಯಿಂದ ಮಾನ್ಯ ಸೋಮಶೇಖರ್ ಹಾಗೂ ಮಾನ್ಯ ಭೈರೇಗೌಡರು ಬಂದಿದ್ದಾರೆ. ತಾವು ಮಾತನಾಡುವುದನ್ನು ನಾವು ಕೇಳುತ್ತೇವೆ, ಹಾಗೂ ತಮ್ಮದೇ ರೂಲಿಂಗ್ ಅನ್ನು ಆಕ್ಸೆಪ್ಟ್

ಮಾಡಿಕೊಂಡಿದ್ದೇವೆ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ವಿಚಾರವನ್ನು ರೂಲ್ 69ರಲ್ಲಿ 31ನೇ ತಾರೀಖು ತೆಗೆದುಕೊಳ್ಳಬೇಕೆಂದು ತೀರ್ಮಾನವಾಗಿಲ್ಲ. ತಮ್ಮ ವಿವೇಚನೆಗೆ ಬಿಟ್ಟಿದ್ದೇವೆ. ತಮ್ಮ ವಿವೇಚನೆಯಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :- ಅಂದು ಮಾನ್ಯ ರಾಮದಾಸ್‌ರವರು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ 30ನೇ ತಾರೀಖಿನವರೆಗೆ ವಿಧೇಯಕಗಳನ್ನು ಹಾಕಬೇಡಿ ಎಂದು ಹೇಳಿದ್ದಾರೆ. ಅದೇ ಪ್ರಕಾರ ಹಾಕಿರಲಿಲ್ಲ. ಇವತ್ತು 31ನೇ ತಾರೀಖು, 17 ದಿವಸಗಳ ಕಾಲ ನಾನ್ ಅಫಿಷಿಯಲ್ ಬಿಸಿನೆಸ್ ಮಾಡಿದ್ದೇವೆ. ಸರ್ಕಾರದ ಬಿಸಿನೆಸ್ ಆಗಿರುವುದು ನಿನ್ನೆ ಒಂದೇ ದಿವಸ. ಇವತ್ತು ಕೆಲವು ವಿಧೇಯಕಗಳು ಇವೆ, ಅವುಗಳನ್ನು ಪಾಸ್ ಮಾಡಿ ಕೊನೆಯಲ್ಲಿ ತೆಗೆದುಕೊಳ್ಳೋಣ. ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ವಿ. ಸೋಮಣ್ಣ :- ಮಾನ್ಯ ಅಧ್ಯಕ್ಷರೆ, ನಾವು ಬಿಸಿನೆಸ್ ಅಡ್ವೈಸರಿ ಕಮಿಟಿ ಮೆಂಬರ್ಸ್ ಅಲ್ಲ. ನಾವು ಸಪರೇಟಾಗಿ ಗೆದ್ದು ಬಂದಿರುವುದು. ತಾವು ಬಿಸಿನೆಸ್ ಅಡ್ವೈಸರಿ ಕಮಿಟಿ ಎಂದು ಹೇಳಿದಿರಿ. ನಗರದ 50 ಲಕ್ಷ ಜನರ ಪರಿಸ್ಥಿತಿ ಇದು.

ಅಧ್ಯಕ್ಷರು :- ಈಗ ಕೆಲವು ವಿಧೇಯಕಗಳನ್ನು ಪಾಸ್ ಮಾಡಿ. ಇವತ್ತೇ ತೆಗೆದುಕೊಳ್ಳೋಣ. ಸೋಮಣ್ಣನವರೆ, ಅದು ಇವತ್ತಿನ ಅಜೆಂಡಾದಲ್ಲಿ ಇದೆ. ತಾವು ಈ ವಿಚಾರವನ್ನು ಅರ್ಜೆಂಟ್ ಇದ್ದರೆ ಕ್ವೊಶ್ಚನ್ ಅವರಿಗಿಂತ ಮೊದಲು ಎದ್ದು ಹೇಳಬೇಕಾಗಿತ್ತು.

ಶ್ರೀ ವಿ. ಸೋಮಣ್ಣ :- ನಾನು ಕ್ವೊಶ್ಚನ್ ಅವರಿಗಿಂತ ಮೊದಲು ಎದ್ದು ಹೇಳಿದೆ. ಆದರೆ ತಾವು ಏನು ಹೇಳಿದಿರಿ? ಅವರು ಮುಗಿದ ಮೇಲೆ ಪ್ರಸ್ತಾಪ ಮಾಡಿ ಎಂದು ಹೇಳಿದಿರು.

ಅಧ್ಯಕ್ಷರು :- ತಾವು ದಯಮಾಡಿ ಕುಳಿತುಕೊಳ್ಳಿ. ಬಿಎಸಿ ಕಮಿಟಿಯಲ್ಲಿ ಏನು ತೀರ್ಮಾನವಾಗಿದೆ ಅದನ್ನು ಇಂಪ್ಲಿಮೆಂಟ್ ಮಾಡುವುದು ನನ್ನ ಕರ್ತವ್ಯ. ಈಗ ಅದನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ನಮಗೆ ಹೇಗೆ ನಿಯಂತ್ರಣವನ್ನು ಇಡುತ್ತಿರೋ ಅದೇ ರೀತಿ ಸದಸ್ಯರನ್ನೂ ಕೂಡ ನಿಯಂತ್ರಣದಲ್ಲಿ ಇಡಬೇಕು. ಈಗ ಎಲ್ಲರೂ ಎತ್ತರದ ಧ್ವನಿಯಲ್ಲಿ ಮಾತನಾಡಿಕೊಂಡು ಹೆದರಿಸಿಕೊಂಡು ಹೋದರೆ ಸದನ ನಡೆಯುವುದು ಹೇಗೆ? ನಾವು ಇಲ್ಲಿ ಪಾಸ್ ಆಗಲಿಲ್ಲವೆಂದರೆ ಮೇಲ್ಮನೆಯಲ್ಲಿ ಏನೂ ಕೆಲಸವೇ ಇಲ್ಲ. ಇವತ್ತು ಬಿಸಿನೆಸ್ ಏನೂ ಇಲ್ಲ. ಅದಕ್ಕಾಗಿ ಒಂದು ಬಿಲ್ ಆದರೂ ಪಾಸ್ ಮಾಡಿ ಕಳುಹಿಸಿದರೆ ಅಲ್ಲಿ ಚರ್ಚೆ ಮಾಡುವುದಕ್ಕಾದರೂ ಅವಕಾಶವಾಗುತ್ತದೆ.

ಅಧ್ಯಕ್ಷರು :- ನಾನ್ ಅಫಿಷಿಯಲ್ ಬಿಸಿನೆಸ್ ಹದಿನೇಳು ದಿವಸವಾಗಿದೆ. ಒಂದು ದಿವಸವಾದರೂ ಇದು ಆಗಲಿ.

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೆ, ಆ ವಿಚಾರವನ್ನು ಚರ್ಚೆ ಮಾಡುವುದರಲ್ಲಿ ವಿರೋಧ ಇಲ್ಲ. ಆದರೆ ....

ಶ್ರೀ ಪಿ.ಜಿ.ಆರ್. ಸಿಂಧ್ಯ :- ಮಾನ್ಯ ಅಧ್ಯಕ್ಷರೆ, 23 ರಿಂದ 26 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಅನುದಾನ ಲೇಖನ ನಾವೆಲ್ಲಾ ಪ್ರೊಟೆಸ್ಟ್ ಮಾಡಿದ ಮೇಲೆ ಇಲ್ಲಿ ಪಾಸ್ ಆಗಿದೆ. ಅಪ್ರೋಪ್ರಿಯೇಷನ್ ಬಿಲ್ ಪಾಸ್ ಆಗಿದೆ. ಬೇಕಾದಷ್ಟು ಅಜೆಂಡಾ ಇದೆ. ಅವರು ಇವತ್ತೆಲ್ಲಾ ಮಾಡುತ್ತಾರೆ. ಇವತ್ತಿಗೆ ಏನೂ ತೊಂದರೆ ಇಲ್ಲ. ತಮ್ಮ ಅನುಮತಿಯನ್ನು ಕೋರಿ ಶೂನ್ಯವೇಳೆಯಲ್ಲಿ,

ಅಧ್ಯಕ್ಷರು :- ಈಗ ತಾವೇ ಹೇಳಿದಿರಿ, ಇಂಟ್ರಡ್ಯೂಸ್ ಮಾಡಿ ಎಂದು.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಮಾಡಿ ಸ್ವಾಮಿ, ಆದರೆ ತಾವು ಶೂನ್ಯವೇಳೆಯಲ್ಲಿ ನಮಗೆ ಅವಕಾಶ ಮಾಡಿಕೊಡಿ. ಅದು ಆದಮೇಲೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು :- ಮೊದಲನೆಯದು ಬಿಲ್ ಟೆಕ್ನಿಕಲ್ ಡಿಫಿಕಲ್ಟೀಸ್ ಇದೆ. ಆದ್ದರಿಂದ ಮೊದಲನೆ ವಿಧೇಯಕ ಬೇಡ. ಎರಡನೆಯದನ್ನು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಂಡಿಸಬೇಕು.

6. ಶಾಸನ ರಚನೆ

(ಅ) ವಿಧೇಯಕ ಮಂಡನೆ

(i) ಕರ್ನಾಟಕ ಆರ್ಥಿಕ ಹೊಣೆಗಾರಿಕೆ ವಿಧೇಯಕ, 2002. ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು) :- ಮಾನ್ಯ ಅಧ್ಯಕ್ಷರೆ, "2002ನೇ ಸಾಲಿನ ಕರ್ನಾಟಕ ಆರ್ಥಿಕ ಹೊಣೆಗಾರಿಕೆ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ."

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ "2002ನೇ ಸಾಲಿನ ಕರ್ನಾಟಕ ಆರ್ಥಿಕ ಹೊಣೆಗಾರಿಕೆ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು) :- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ, "2002ನೇ ಸಾಲಿನ ಕರ್ನಾಟಕ ಆರ್ಥಿಕ ಹೊಣೆಗಾರಿಕೆ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು :- ವಿಧೇಯಕವನ್ನು ಮಂಡಿಸಲಾಯಿತು. ಅನುಬಂಧ - II

(ii) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2002, ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರ್) (ಕೃಷಿ ಮಾರುಕಟ್ಟೆ ಸಚಿವರು) :- ಮಾನ್ಯ ಅಧ್ಯಕ್ಷರೆ, "2002ನೇ ಸಾಲಿನ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ, "2002ನೇ ಸಾಲಿನ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು) :- ಮಾನ್ಯ ಅಧ್ಯಕ್ಷರೆ, 2002ನೇ ಸಾಲಿನ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕರನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :- ವಿಧೇಯಕವನ್ನು ಮಂಡಿಸಲಾಯಿತು. ಅನುಬಂಧ III